ಖುದ್ದು ಸಣ್ಣ ಪುಟ್ಟ ವಿಡಿಯೊಗಳನ್ನು ಮಾಡಿದರೂ, ಸಿನಿಮಾಗಳನ್ನು ನೋಡುವುದು ಮಲ್ಲು ಅವರಿಗೆ ಈಗಲೂ ಇಷ್ಟದ ಹವ್ಯಾಸ. ‘ಶಾಖಾಹಾರಿ’, ‘ಬ್ಲಿಂಕ್’ ರೀತಿಯ ಕನ್ನಡ ಚಿತ್ರಪ್ರಯೋಗಗಳನ್ನು ಅವರು ಮೆಚ್ಚಿಕೊಳ್ಳುತ್ತಾರೆ. ಈ ರೀತಿಯ ಹೊಸತನದ ಸಿನಿಮಾಗಳು ಭವಿಷ್ಯದ ಕುರಿತು ಭರವಸೆಯನ್ನು ಮತ್ತೆ ಮತ್ತೆ ಚಿಗುರುವಂತೆ ಮಾಡುತ್ತವೆ ಎನ್ನುವ ಮಲ್ಲು ಅವರು ಚಿತ್ರರಂಗದ ಕೆಲವರಿಗೆ ಪರಿಚಿತ ಮುಖವೇ ಆಗಿದ್ದಾರೆ.

ಒಂದು ವೆಬ್ ಸರಣಿಯನ್ನು ಮಾಡುವುದಾದರೆ, ಒಂದು ಕಂತಿನ ವಿಡಿಯೊವನ್ನು ಮಲ್ಲು ಪೂರ್ಣಪ್ರಮಾಣದಲ್ಲಿ ಚಿತ್ರಿಸಿಕೊಳ್ಳುತ್ತಾರೆ. ಆಮೇಲೆ ಅದರಲ್ಲಿನ ಕೆಲವು ಹೈಲೈಟ್ ಎನಿಸುವ ದೃಶ್ಯಗಳನ್ನೇ ಇಟ್ಟುಕೊಂಡು ಪುಟ್ಟ ಪುಟ್ಟ ರೀಲ್ಸ್ ಮಾಡಿ, ಅವನ್ನೂ ಅಪ್‌ಲೋಡ್ ಮಾಡುತ್ತಾರೆ. ಇನ್‌ಸ್ಟಾಗ್ರಾಂನಲ್ಲಿ ಇಂತಹ ರೀಲ್ಸ್ ಕಟ್ಟಿಕೊಡುವ ಪ್ರೇಕ್ಷಕವರ್ಗ ದೊಡ್ಡದು ಎನ್ನುವುದೂ ಅವರಿಗೆ ಗೊತ್ತಾಗಿದೆ. ತಂತಾವೇ ಅಪ್‌ಡೇಟ್ ಆಗುತ್ತಾ, ಹೊಸಕಾಲದ ಅಗತ್ಯಗಳನ್ನು ಒಪ್ಪಿಕೊಳ್ಳುತ್ತಾ ಬಂದಿರುವ ಮಲ್ಲು ಬಾಗಲಕೋಟೆ ಅವರು ಉತ್ತರ ಕರ್ನಾಟಕ ಭಾಷೆಯ ಗಂಧ–ಗಾಳಿಯನ್ನು ಪುಟ್ಟ ಮನರಂಜನಾ ವೇದಿಕೆಯ ತುಂಬೆಲ್ಲ ಪಸರಿಸಿದ್ದಾರೆ.

## ಯೂಟ್ಯೂಬ್‌ನಿಂದ ಸಿನಿಮಾದತ್ತ ಚಿತ್ತ

ಯೂಟ್ಯೂಬ್ ಚುಂಗು ಹಿಡಿದುಕೊಂಡು, ಸಿನಿಮಾದ ತಾರೆಗಳನ್ನು ಕೈಗೆಟುಕಿಸಿಕೊಳ್ಳುವ ಕನಸು ಕಾಣುತ್ತಿರುವವರಲ್ಲಿ ಪ್ರಿಯಾ ಸವಡಿ ಅವರೂ ಒಬ್ಬರು. ಮುಖದ ಮೇಲೆ ಹೊಡೆಯುವಷ್ಟು ಆತ್ಮವಿಶ್ವಾಸವನ್ನು ಇವರು ಮಾತಿನಲ್ಲಿ ತುಳುಕಿಸಬಲ್ಲರು.

ಕೋವಿಡ್ ಲಾಕ್‌ಡೌನ್ ಆದ ಹೊತ್ತಿನಲ್ಲಿ ಪ್ರಿಯಾ ಪಿಯು ವಿಜ್ಞಾನ ವಿಷಯದ ವಿದ್ಯಾರ್ಥಿನಿ. ನೀಟ್ ಪರೀಕ್ಷೆಗೆ ಸಿದ್ಧತೆ ನಡೆಸಿದ್ದರು. ಟಿಕ್‌ಟಾಕ್ ನೋಡಿ, ತಾವೂ ವಿಡಿಯೊ ಮಾಡುವ ಹವ್ಯಾಸಕ್ಕೆ ಜಿಗಿದರು.

ಶಾಲಾ ದಿನಗಳಿಂದಲೂ ಪ್ರಿಯಾ ಅವರಿಗೆ ಮನರಂಜನೆಯೆಂದರೆ ಮುಖ ಮೊರದಗಲ ಆಗುತ್ತಿತ್ತು. ಸಣ್ಣ ಪುಟ್ಟ ವಿಡಿಯೊಗಳನ್ನು ಮಾಡುವುದರಿಂದ ಶುರುವಾದ ಹವ್ಯಾಸವು ಆಮೇಲೆ ಸಾಂಘಿಕ ಪ್ರಯತ್ನಕ್ಕೂ ಕೈಜೋಡಿಸುವ ಮಟ್ಟಕ್ಕೆ ವಿಸ್ತರಿಸಿತು. ಮಲ್ಲು ಜಮಖಂಡಿ, ಜವಾರಿ ಜಂಕ್ಷನ್ ಯೂಟ್ಯೂಬ್ ವೇದಿಕೆಗಳ ಕಂತುಗಳಲ್ಲಿ ಪ್ರಿಯಾ ಅವರ ಅಭಿನಯ ಮೆಚ್ಚಿಕೊಂಡವರ ಸಂಖ್ಯೆ ದೊಡ್ಡದಿದೆ. ಗೌರವ್‌ಶೆಟ್ಟಿ ಹಾಗೂ ಅಮಿತ್‌ರಾಜ್ ಎಂಬ ಯೂಟ್ಯೂಬರ್‌ಗಳ ಜೊತೆಗೂಡಿ, ಬಯಲು ಸೀಮೆಯ ಭಾಷೆ ಹಾಗೂ ಜವಾರಿ ಭಾಷೆ ಬೆರೆತ ಸರಣಿಯಲ್ಲೂ ಪ್ರಿಯಾ ನಟಿಸಿದರು. ‘ವಾರಗಿತ್ತಿ’ ಎಂಬ ಆ ಸರಣಿಯಲ್ಲಿ ಇವರದ್ದು ಉತ್ತರ ಕರ್ನಾಟಕದ ಜವಾರಿ ಭಾಷೆಯಾದರೆ, ಉಳಿದ ಪಾತ್ರಗಳು ತಂತಮ್ಮವೇ ಆದ ರಾಜ್ಯದ ಬೇರೆ ಭಾಗಗಳ ಭಾಷೆಗಳನ್ನು ಬಳಸುತ್ತಾ ಹೋಗುತ್ತವೆ. ಈ ಪ್ರಯೋಗಕ್ಕೂ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು ಎನ್ನುವ ಪ್ರಿಯಾ, ‘ನನ್ನ ಎಂಡ್ ಗೋಲ್ ಸಿನಿಮಾಗಳಲ್ಲಿ ಅಭಿನಯಿಸುವುದು’ ಎಂದು ಸ್ಪಷ್ಟವಾಗಿ ಹೇಳುತ್ತಾರೆ.

ಉತ್ತರ ಕರ್ನಾಟಕದ ಭಾಷೆಯ ಕುರಿತು ರಾಜ್ಯದ ಉದ್ದಗಲಕ್ಕೂ ಹೆಮ್ಮೆಯ ಭಾವವೊಂದು ಇದೆ ಎನ್ನುವ ಈ ನಟಿ ಇದುವರೆಗೆ 90 ಯೂಟ್ಯೂಬ್ ಕಂತುಗಳಲ್ಲಿ ಅಭಿನಯದ ದರ್ಶನ ಮಾಡಿಸಿದ್ದಾರೆ. ಎರಡು ಸಿನಿಮಾಗಳಲ್ಲಿಯೂ ನಟಿಸಿದ್ದಾರೆ.

ಯೂಟ್ಯೂಬ್‌ನಲ್ಲೂ ಕಂಟೆಂಟ್ ಅನ್ನು ಮುಂದಿನ ಹಂತಕ್ಕೆ ಮೇಲೆತ್ತುವ ಸವಾಲು ಸದಾ ಇರುತ್ತದೆ. ಅತಿ ಹೆಚ್ಚು ಸ್ಥಳೀಯ ಎನ್ನಿಸುವ ವಿಷಯಗಳನ್ನು ಮನರಂಜನೆಯಲ್ಲಿ ತಂದರೆ, ಈಗೀಗ ನೋಡುಗರು ಸ್ವೀಕರಿಸುತ್ತಿರುವುದು ಹೆಚ್ಚು. ‘ಕಾಂತಾರ’ ಸಿನಿಮಾ ಯಶಸ್ಸು ಅದಕ್ಕೆ ಉದಾಹರಣೆ ಎನ್ನುವ ಪ್ರಿಯಾ, ಈ ಪರಿಕಲ್ಪನೆಯನ್ನು ‘ಹೆವಿ ಲೋಕಲ್’ ಎಂದು ತಮ್ಮದೇ ಶೈಲಿಯಲ್ಲಿ ಬಣ್ಣಿಸುತ್ತಾರೆ.

ಉತ್ತರ ಕರ್ನಾಟಕದ ಜವಾರಿ ಭಾಷೆಯನ್ನು ರಾಜು ತಾಳಿಕೋಟೆ, ಪ್ರಾಣೇಶ್ ಅವರಂತಹವರು ತಮ್ಮ ನಗೆ ಚಟಾಕಿಗಳಿಂದ ಬಹಳಷ್ಟು ವರ್ಷಗಳ ಹಿಂದೆಯೇ ಜನಪ್ರಿಯಗೊಳಿಸಿದ್ದನ್ನು ಪ್ರಿಯಾ ಸ್ಮರಿಸುತ್ತಾರೆ. ಬೇರೆ ಬೇರೆ ಕಾಲಘಟ್ಟದಲ್ಲಿ ಅವರೆಲ್ಲ ಜನರನ್ನು ನಗಿಸುತ್ತಾ ಬಂದರು. ಇದೇ ಶೈಲಿಯಲ್ಲಿ ಅನೇಕರು ಹಾಸ್ಯ ಮಾಡುವ ಪ್ರಯತ್ನಗಳನ್ನು ನಡೆಸಿ, ಸ್ವಲ್ಪ ಕಾಲದ ನಂತರ ಎಲ್ಲೋ ಕಳೆದು ಹೋದಂತೆ ಆದ ಉದಾಹರಣೆಗಳೂ ಇವೆ ಎನ್ನುತ್ತಾರೆ.

## ಯೂಟ್ಯೂಬ್ ಹುಲ್ಲುಗಾವಲು

ಯೂಟ್ಯೂಬ್ ವಿಡಿಯೊ ಚಿತ್ರೀಕರಣವು ಈಗ ಹೆಚ್ಚು ವೃತ್ತಿಪರವಾಗಿದೆ. ಖರ್ಚನ್ನು ಹುಟ್ಟಿಸಿಕೊಳ್ಳುವ ದಾರಿಗಳು ಇವೆ. ಲಾಭ ಮಾಡುವ ಮಟ್ಟಕ್ಕೆ ಬೆಳೆದಿರುವ ಯೂಟ್ಯೂಬರ್‌ಗಳು ಕೂಡ ಇದ್ದಾರೆ ಎನ್ನುವ ಈ ನಟಿ ಕೆಲವೇ ತಿಂಗಳುಗಳ ಹಿಂದೆ ಖುದ್ದು ತಮ್ಮದೇ ಪಾಡ್‌ಕಾಸ್ಟ್ ಪ್ರಾರಂಭಿಸಿದ್ದಾರೆ. ‘ಪ್ರಿಯಾ ಸವಡಿ’ ಹೆಸರಿನ ಈ ಪಾಡ್‌ಕಾಸ್ಟ್‌ನಲ್ಲಿ ಅವರು ಖುದ್ದು ತಮ್ಮದೇ ಪರಿಚಯ ತೋರಿಸುವ ಒಂದೂಕಾಲು ನಿಮಿಷದ ಪುಟ್ಟ ವಿಡಿಯೊ ಮಾಡಿದ್ದಾರೆ. ತಾವು ಎನ್‌ಸಿಸಿಯಲ್ಲಿ ಹಾಕಿದ್ದ ಹೆಜ್ಜೆಗಳು, ಪಡೆದ ಪದಕಗಳು, ಮಾಡುವ ವ್ಯಾಯಾಮ, ಆಳದ ಬಾವಿಗೆ ಎತ್ತರದಿಂದ ಧುಮುಕುವ ಪರಿ, ಬುಲೆಟ್ ಬೈಕ್ ಓಡಿಸುವ ದಿಟ್ಟತನ, ಸ್ಕೇಟಿಂಗ್ ಮಾಡಿದ ನೆನಪು, ಕಾರು ಕಾರುಬಾರು... ಎಲ್ಲದರ ಝಲಕ್ ಅನ್ನು ಈ ಪುಟ್ಟ ವಿಡಿಯೊ ನೀಡುತ್ತದೆ. ‘ಖಡಕ್ ಚಾಯ್ ವಿತ್ ಖಡಕ್ ಮಂದಿ’ ಎನ್ನುವ ತಮ್ಮದೇ ಕಾರ್ಯಕ್ರಮವೊಂದರ ಪ್ರೋಮೊ ಆಗಿಯೂ ಅದನ್ನು ದುಡಿಸಿಕೊಂಡಿದ್ದಾರೆ ಪ್ರಿಯಾ. ಲಪಂಜ್ ರಾಜ, ಪರಶು ಕೋಲೂರ, ಹರೀಶ್ ಹಿರಿಯೂರು ಮೊದಲಾದ ಸ್ಥಳೀಯ ಪ್ರತಿಭೆಗಳನ್ನು ತಮ್ಮ ಪಾಡ್‌ಕಾಸ್ಟ್ ಚಾನಲ್‌ನಲ್ಲಿ ಸಂದರ್ಶಿಸಿದ್ದಾರೆ. ‘ಕಾಫಿ ವಿತ್ ಕರಣ್’ ಮಾದರಿಯಿಂದ ಸ್ಫೂರ್ತಿ ಪಡೆದ ಜವಾರಿ ಶೋ ಇದು ಎನ್ನಲಡ್ಡಿಯಿಲ್ಲ.

ಈ ಪಾಡ್‌ಕಾಸ್ಟ್ ಚಾನಲ್ ಅನ್ನೇ ಸಿನಿಮಾಗಳ



> ಯೂಟ್ಯೂಬ್‌ನಲ್ಲೂ ಕಂಟೆಂಟ್ ಅನ್ನು ಮುಂದಿನ ಹಂತಕ್ಕೆ ಮೇಲೆತ್ತುವ ಸವಾಲು ಸದಾ ಇರುತ್ತದೆ. ಅತಿ ಹೆಚ್ಚು ಸ್ಥಳೀಯ ಎನ್ನಿಸುವ ವಿಷಯಗಳನ್ನು ಮನರಂಜನೆಯಲ್ಲಿ ತಂದರೆ, ಈಗೀಗ ನೋಡುಗರು ಸ್ವೀಕರಿಸುತ್ತಿರುವುದು ಹೆಚ್ಚು. ‘ಕಾಂತಾರ’ ಸಿನಿಮಾ ಯಶಸ್ಸು ಅದಕ್ಕೆ ಉದಾಹರಣೆ. ಉತ್ತರ ಕರ್ನಾಟಕದ ಜವಾರಿ ಭಾಷೆಯನ್ನು ರಾಜು ತಾಳಿಕೋಟೆ, ಪ್ರಾಣೇಶ್ ಅವರಂತಹವರು ತಮ್ಮ ನಗೆ ಚಟಾಕಿಗಳಿಂದ ಬಹಳಷ್ಟು ವರ್ಷಗಳ ಹಿಂದೆಯೇ ಜನಪ್ರಿಯಗೊಳಿಸಿದ್ದಾರೆ. ಇದೇ ಶೈಲಿಯಲ್ಲಿ ಅನೇಕರು ಹಾಸ್ಯ ಮಾಡುವ ಪ್ರಯತ್ನಗಳನ್ನು ನಡೆಸಿ, ಸ್ವಲ್ಪ ಕಾಲದ ನಂತರ ಎಲ್ಲೋ ಕಳೆದು ಹೋದಂತೆ ಆದ ಉದಾಹರಣೆಗಳೂ ಇವೆ. ಉತ್ತರ ಕರ್ನಾಟಕದ ಭಾಷೆಯ ಕುರಿತು ರಾಜ್ಯದ ಉದ್ದಗಲಕ್ಕೂ ಹೆಮ್ಮೆಯ ಭಾವವೊಂದು ಇದೆ.
>
> –ಪ್ರಿಯಾ ಸವಡಿ